# ದಿ. (ಸೌ.) ಸುಜಾತಾ ಕುಲಕರ್ಣಿಯವರ ಕಠಿಣ ಜೀವನ ಮತ್ತು ಸಾಧನೆಯ ಪ್ರಯಾಣ

## ಗ್ರಂಥದ ಅನುಕ್ರಮಣಿಕೆ


೧. ಸೌ. ಕುಲಕರ್ಣಿಯವರ ಬಾಲ್ಯ ಮತ್ತು ವಿವಾಹದ ನಂತರದ ಜೀವನ ೧೧

೨. ಸೌ. ಕುಲಕರ್ಣಿಯವರು ಮಕ್ಕಳಾಗಲು ಮಾಡಿದ ಹರಕೆಗಳು ಮತ್ತು ೧೫ ವರ್ಷಗಳ ನಂತರ ಮಗು ಆಗುವ ಸಂದರ್ಭದಲ್ಲಿ ಬಂದ ಅನುಭೂತಿಗಳು ೧೪

೩. ಮಗಳು ಕು. ತೃಪ್ತಿ ಕುಲಕರ್ಣಿ ಇವಳಿಗೆ ಹುಟ್ಟಿದಾಗಿನಿಂದ ಆಗಿರುವ ವಿವಿಧ ರೀತಿಯ ಅಸಹನೀಯ ತೊಂದರೆಗಳು ೨೦

೪. ಸೌ. ಕುಲಕರ್ಣಿಯವರು ತಮ್ಮ ಮಗಳ ಬಗ್ಗೆ ಬರೆದ ಲೇಖನವನ್ನು ಸದ್ಗುರು ಸತ್ಯವಾನ ದಾದಾರವರು ಬೆರಳಚ್ಚು ಮಾಡುವುದು ೪೬

೫. ಸೌ. ಕುಲಕರ್ಣಿಯವರ ಪತಿ ಶ್ರೀ. ದೇವದತ್ತ ಕುಲಕರ್ಣಿಯವರು ಹೇಳಿದ ತಮ್ಮ ವಿವಾಹದಿಂದ ಪತ್ನಿಯ ಮೃತ್ಯುವಿನವರೆಗೆ ಸಂಕ್ಷಿಪ್ತ ಜೀವನಪ್ರವಾಸ ! ೪೭

೬. ಸೌ. ಸುಜಾತಾ ಕುಲಕರ್ಣಿಯವರ ಪತಿ ಶ್ರೀ. ದೇವದತ್ತ ಕುಲಕರ್ಣಿ ಇವರಿಗಾದ ಮಾನಸಿಕ ತೊಂದರೆಗಳು ಮತ್ತು ಸನಾತನದ ಮಾರ್ಗದರ್ಶನಕ್ಕನುಸಾರ ಸಾಧನೆಯನ್ನು ಆರಂಭಿಸುವುದು ೫೧

೭. ಸೌ. ಕುಲಕರ್ಣಿಯವರು ತಮಗಾಗುತ್ತಿದ್ದ ಶಾರೀರಿಕ ತೊಂದರೆಗಳಲ್ಲಿಯೂ ಅಖಂಡವಾಗಿ ಮಾಡಿದ ಸೇವೆ ೬೧

೮. ಸೌ. ಕುಲಕರ್ಣಿಯವರಿಗೆ ಪರಾತ್ಪರ ಗುರು ಡಾಕ್ಟರರ ಮೇಲಿದ್ದ ಭಾವ ೬೬

೯. ಶ್ರೀ. ಮತ್ತು ಸೌ. ಕುಲಕರ್ಣಿ ಇವರು ಪೂರ್ಣವೇಳೆ ಆಶ್ರಮದಲ್ಲಿರಲು ಬರುವುದು ೭೦

೧೦. ಸೌ. ಕುಲಕರ್ಣಿಯವರಿಗೆ ಬಂದ ಅನುಭೂತಿಗಳು ೭೪

೧೧. ಸೌ. ಸುಜಾತಾ ಕುಲಕರ್ಣಿಯವರ ತೊಂದರೆಗಳ ಬಗ್ಗೆ ದೈನಿಕ 'ಸನಾತನ ಪ್ರಭಾತ'ದಲ್ಲಿ ಮುದ್ರಿಸಿದ ಲೇಖನಮಾಲಿಕೆಯನ್ನು ಓದಿ ಅವರ ಬಂಧು ಬಳಗದವರು, ಸಾಧಕರು ಮತ್ತು ಸಂತರು ವ್ಯಕ್ತಪಡಿಸಿದ ವಿಚಾರಗಳು ೮೩

卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೯೬

## ಮನೋಗತ

### ೧. ಅನೇಕ ತೊಂದರೆಗಳಿದ್ದರೂ ಶ್ರೀ. ಮತ್ತು ಸೌ. ಕುಲಕರ್ಣಿಯವರು ಶೇ. ೬೦ ಕ್ಕಿಂತ ಹೆಚ್ಚು ಆಧ್ಯಾತ್ಮಿಕ ಮಟ್ಟವನ್ನು ತಲುಪುವುದು

‘ಶ್ರೀ. ದೇವದತ್ತ ಕುಲಕರ್ಣಿಯವರು ನನ್ನ ಬಳಿ ೧೯೮೪ ರ ಕೊನೆಯಲ್ಲಿ ಮಾನಸೋಪಚಾರಕ್ಕಾಗಿ ಬಂದಿದ್ದರು. ಆಗ ಅವರಿಗೆ ೫೨ ವರ್ಷ ವಯಸ್ಸಾಗಿತ್ತು. ಅವರು ನಾಸ್ತಿಕರಾಗಿದ್ದರು. ಭೇಟಿಯ ನಂತರ ೧-೨ ತಿಂಗಳುಗಳಲ್ಲಿಯೇ ಅವರು ನಾನು ಹೇಳಿದ ಹಾಗೆ ನಾಮಜಪ ಮಾಡಲು ಆರಂಭಿಸಿದರು. ಅವರ ಪತ್ನಿ ಸೌ. ಸುಜಾತಾ ಕುಲಕರ್ಣಿಯವರು ಆಗ ಕರ್ಮಕಾಂಡಕ್ಕನುಸಾರ ಸಾಧನೆಯನ್ನು ಮಾಡುತ್ತಿದ್ದರು. ಸೌ. ಕುಲಕರ್ಣಿಯವರಿಗೆ ಅವರ ಮೃತ್ಯುವಿನ ತನಕ ತೀವ್ರ ಶಾರೀರಿಕ ತೊಂದರೆಗಳು, ಮೃತ್ಯುವಿನ ಮೊದಲು ೧ ವರ್ಷ ತೀವ್ರ ಮಾನಸಿಕ ತೊಂದರೆಗಳು; ಶ್ರೀ. ಕುಲಕರ್ಣಿಯವರಿಗೆ ೧೦ ವರ್ಷಗಳ ಕಾಲ ತೀವ್ರ ಮಾನಸಿಕ ತೊಂದರೆಗಳು ಮತ್ತು ಅವರ ಮಗಳು ಕು. ತೃಪ್ತಿಗೆ ಹುಟ್ಟಿನಿಂದಲೇ ತೀವ್ರ ಆಧ್ಯಾತ್ಮಿಕ ತೊಂದರೆಗಳಿವೆ. ಇಂತಹ ಪ್ರಸಂಗಗಳಲ್ಲಿ ಕುಲಕರ್ಣಿ ಕುಟುಂಬದವರು ಅವುಗಳನ್ನು ಹೇಗೆ ಎದುರಿಸಿದರು ಎಂಬುದು ಈ ಗ್ರಂಥದಿಂದ ಎಲ್ಲರಿಗೂ ಕಲಿಯಲು ಸಿಗುವುದು. ಒಂದೇ ಕುಟುಂಬದಲ್ಲಿನ ಮೂವರಿಗೂ ಅನೇಕ ವರ್ಷಗಳ ಕಾಲ ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ತೀವ್ರ ತೊಂದರೆಗಳಿದ್ದರೂ ಅವರು ಸಾಧನೆಯನ್ನು ಮಾಡಿದರು. ನಾಸ್ತಿಕರಾಗಿದ್ದರೂ ಸಾಧನೆಯನ್ನು ಮಾಡಿದ್ದರಿಂದ ಶ್ರೀ. ದೇವದತ್ತ ಕುಲಕರ್ಣಿಯವರು ಶೇ. ೬೩ ರಷ್ಟು ಆಧ್ಯಾತ್ಮಿಕ ಮಟ್ಟವನ್ನು ತಲುಪಿದ್ದಾರೆ ಮತ್ತು ತೀವ್ರ ಅಡಚಣೆಗಳಲ್ಲಿಯೂ ಸಾಧನೆ ಮಾಡಿದುದರಿಂದ ಸೌ. ಸುಜಾತಾ ಕುಲಕರ್ಣಿಯವರು ಶೇ. ೬೧ ರಷ್ಟು ಆಧ್ಯಾತ್ಮಿಕ ಮಟ್ಟವನ್ನು ತಲುಪಿದ್ದಾರೆ.’

### ೨. ಕಠಿಣ ಜೀವನದ ಬಗ್ಗೆ ತೃಪ್ತಿಯು ಯಾವತ್ತೂ ಯಾರಿಗೂ ಹೇಳದಿರುವುದು ಪ್ರಶಂಸನೀಯವಾಗಿದೆ

‘ಕು. ತೃಪ್ತಿ ಕುಲಕರ್ಣಿಯ ತಾಯಿಯವರು ತೃಪ್ತಿಯ ಜನ್ಮ, ಶಿಕ್ಷಣ, ಸಣ್ಣವಳಿದ್ದಾಗಿನಿಂದ ಅವಳ ಸ್ವಭಾವ, ಅವಳಿಗಾದ ಕೆಟ್ಟ ಶಕ್ತಿಗಳ ವಿವಿಧ ತೊಂದರೆಗಳು ಮತ್ತು ಅವಳ ಮೃತ್ಯುಯೋಗ ಇತ್ಯಾದಿಗಳ ಬಗ್ಗೆ ಈ ಗ್ರಂಥದಲ್ಲಿ ಯಾವ ಮಾಹಿತಿಯನ್ನು ಕೊಟ್ಟಿದ್ದಾರೆಯೋ ಅದು ಏಕಮೇವಾದ್ವಿತೀಯವಾಗಿದೆ. ಸನಾತನದ ಸಾವಿರಾರು ಸಾಧಕರಲ್ಲಿ ಒಬ್ಬರೂ ತೃಪ್ತಿಯಷ್ಟು ಕಠಿಣ ಜೀವನವನ್ನು ಅನುಭವಿಸಿಲ್ಲ. ಆ ಕಠಿಣ ಜೀವನದ ಬಗ್ಗೆ ತೃಪ್ತಿಯು ಯಾವತ್ತೂ ಯಾರಿಗೂ ಹೇಳಿಯೂ ಇಲ್ಲ. ಇದರ ಬಗ್ಗೆ ಯಾರಿಗಾದರೂ ಅವಳಿಗೆ ಪ್ರಶಂಸೆ ಮಾಡಬೇಕೆಂದು ಅನಿಸಬಹುದು !

## ೩. ಲೇಖನದಲ್ಲಿನ ಹೆಚ್ಚಿನ ಭಾಗ ತೊಂದರೆಗಳ ಬಗ್ಗೆ ಇದ್ದರೂ ಲೇಖನವನ್ನು ಓದಲು ಆರಂಭಿಸಿದಾಗಿನಿಂದ ಕೊನೆಯವರೆಗೆ ಅತ್ಯಂತ ಜಿಜ್ಞಾಸೆಯಿಂದ ಓದಲ್ಪಡುವುದು

ತೃಪ್ತಿಯಷ್ಟೇ ಅವಳ ತಾಯಿಯನ್ನೂ ಪ್ರಶಂಸೆ ಮಾಡಬೇಕೆಂದೆನಿಸುತ್ತದೆ; ಏಕೆಂದರೆ ಅವರು ಬರೆದ ಲೇಖನವನ್ನು ಓದುವಾಗ ನಮಗೆ ದುಃಖವಾಗುತ್ತದೆ. ಅವಳ ತಾಯಿ ಅದರಲ್ಲಿನ ಪ್ರತಿಯೊಂದು ಅತಿ ದುಃಖದಾಯಕ ಪ್ರಸಂಗಗಳನ್ನು ಸ್ವತಃ ಅನುಭವಿಸಿದ್ದಾಳೆ. ಪ್ರಸಂಗಗಳನ್ನು ಬರೆಯುವಾಗ ಅವರು ಮನಸ್ಸಿನಿಂದ ಹೇಗೆ ಸ್ಥಿರವಾಗಿದ್ದರೋ, ಅದೇ ರೀತಿ ಪ್ರಸಂಗಗಳು ಘಟಿಸುತ್ತಿರುವಾಗಲೂ ಅವರು ಮನಸ್ಸಿನಿಂದ ಸ್ಥಿರವಾಗಿದ್ದರು. ಅವರು ಬರೆದ ಈ ಲೇಖನದ ಭಾಷೆಯೂ ಯಾವುದಾದರೊಬ್ಬ ದೊಡ್ಡ ಲೇಖಕನಂತೆ ಸ್ವಯಂಪ್ರೇರಿತ ಮತ್ತು ಸಹಜವಾಗಿದೆ. ಆದ್ದರಿಂದ ಲೇಖನದಲ್ಲಿನ ಹೆಚ್ಚಿನ ಭಾಗ ತೊಂದರೆಗಳ ಬಗ್ಗೆ ಇದ್ದರೂ ಲೇಖನವನ್ನು ಓದಲು ಆರಂಭಿಸಿದಾಗಿನಿಂದ ಕೊನೆಯವರೆಗೆ ಅತ್ಯಂತ ಜಿಜ್ಞಾಸೆಯಿಂದ ಓದಬೇಕೆಂದು ಅನಿಸುತ್ತದೆ.

ಸಾಧನೆಯನ್ನು ಮಾಡುವ ಪ್ರತಿಯೊಬ್ಬ ಸಾಧಕನ ಜೀವನದಲ್ಲಿ ಹೆಚ್ಚು-ಕಡಿಮೆ ತೀವ್ರತೆಯ ದುಃಖದಾಯಕ ಪ್ರಸಂಗಗಳು ಬರುತ್ತವೆ. ತೃಪ್ತಿಯ ತಾಯಿಯು ಬರೆದ ಪ್ರಸಂಗಗಳಿಂದ ಎಲ್ಲರಿಗೂ 'ಅತಿದುಃಖದಾಯಕ ಪ್ರಸಂಗಗಳನ್ನು ಹೇಗೆ ಎದುರಿಸಬೇಕು ?' ಎಂಬುದು ಕಲಿಯಲು ಸಿಗುತ್ತದೆ. 'ಇತರರಿಗೆ ಇದನ್ನು ಕಲಿಸುವ ತೃಪ್ತಿ ಮತ್ತು ಅವಳ ತಾಯಿಯ ಉತ್ತರೋತ್ತರ ಶೀಘ್ರ ಆಧ್ಯಾತ್ಮಿಕ ಪ್ರಗತಿಯಾಗಲಿ' ಎಂದು ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಪ್ರಾರ್ಥನೆ !'

**– (ಪರಾತ್ಪರ ಗುರು) ಡಾ. ಆಠವಲೆ (೨೭.೭.೨೦೨೦)**

**ಸನಾತನದ ಗ್ರಂಥಗಳನ್ನು ನಿಯಮಿತವಾಗಿ ಖರೀದಿಸುವ ವಾಚಕರಿಗೆ ವಿನಂತಿ !**

ಸನಾತನದ ಹೊಸ ಗ್ರಂಥಗಳ ಬಗ್ಗೆ ತಿಳಿದುಕೊಳ್ಳುವುದಿದ್ದಲ್ಲಿ ಸಂಪರ್ಕಿಸಿ –

E-mail : chaitanya.grantha@gmail.com ಸಂಚಾರವಾಣಿ : ೯೩೪೨೫೯೯೨೯೯

**'ಸನಾತನ'ದ ಗ್ರಂಥ 'ಆನ್‌ಲೈನ್'ನಲ್ಲಿ ಖರೀದಿಸಲು – www.SanatanShop.com**